**ನಾನೀಗ ಮುದುಕನಾಗುತ್ತಲಿದ್ದೇನೆ. ನನ್ನ ಗೆಳೆಯರು ಕಂಪ್ಯೂಟರ್ ಮೇಲೆ ಕೆಲಸ ಮಾಡುತ್ತಿದ್ದಾರೆ. ಆದರೆ, ನನಗೆ ಮಾತ್ರ ಕೈಯಿಂದ ಬರೆಯುವುದೇ ಇಷ್ಟ. ನನಗೆ ಬರೆಯಲು ಬೆಳಗಿನ ಸೂರ್ಯ ಬೇಕು. ರಾತ್ರಿ ಬರೆಯುವುದಿಲ್ಲ.**

ಮಾಡುತ್ತೇನೆ. ಮಧ್ಯಾಹ್ನ ಕಾಫಿಗಾಗಿ ಒಂದು ಬ್ರೇಕ್. ಆನಂತರ ಮತ್ತೆ ಕೆಲಸ ಸಾಯಂಕಾಲದ ವರೆಗೆ ಮುಂದುವರಿಯುತ್ತದೆ. ಮಹಾಕಾವ್ಯದಂತೆ ಈ ದೀರ್ಘ ಕೆಲಸ ನಾಲ್ಕೈದು ವರ್ಷಗಳವರೆಗೆ ನಡೆಯುತ್ತದೆ. ಬರೆದು ಮುಗಿಸಿದಾಗ ನಾನು ತೀರ ದಣಿದಿರುತ್ತೇನೆ.

◆ **ಬ್ರೆಕ್ಟ್ ಸಹ ತನ್ನ ಕಲಾಕೃತಿಯನ್ನು ಮತ್ತೆಮತ್ತೆ ಬರೆಯಬೇಕು ಎನ್ನುತ್ತಾನೆ. ಅದು ಪ್ರಕಟಗೊಂಡ ನಂತರವೂ ಅದನ್ನು ಪರಿಪೂರ್ಣ ಎಂದೊಪ್ಪುತ್ತಿರಲಿಲ್ಲ.**

ನನಗೆ ಹಾಗೇನೂ ಅನಿಸುವುದಿಲ್ಲ. 'ದ ಟಿನ್ ಡ್ರಮ್' ಅಥವಾ 'ಫ್ರಮ್ ದ ಡೈರಿ...' ಈ ಕಲಾಕೃತಿಗಳನ್ನು ನಾನು ಜೀವನದ ಒಂದು ವಿಶಿಷ್ಟ ತಿರುವಿನಲ್ಲೇ ಬರೆಯುವುದು ಸಾಧ್ಯವಾಯಿತು. ಈ ಕಲಾಕೃತಿಗಳನ್ನು ಮರಳಿ ಬರೆಯಬೇಕೆಂದು ನಿರ್ಧರಿಸಿದರೆ, ನಾನವನ್ನು ನಾಶ ಮಾಡುತ್ತೇನೆ.

◆ **ಸತ್ಯ ಕಥೆಗೂ ಮತ್ತು ಕಾವ್ಯ, ಕಾದಂಬರಿಯ ಬರವಣಿಗೆಗೂ ಏನು ವ್ಯತ್ಯಾಸ?**

ಈ ಬಗೆಯ ಭೇದ ಮಾಡುವುದು ನಿರರ್ಥಕ. ಪುಸ್ತಕ ಮಾರಾಟಗಾರರಿಗೆ ಸಾಹಿತ್ಯ ಪ್ರಕಾರವನ್ನು ಗುರುತಿಸಲು ಅದರಿಂದ ಸಹಾಯವಾಗುತ್ತಿರಬಹುದು. ನನ್ನ ಪುಸ್ತಕಗಳನ್ನು ಹೀಗೆ ವರ್ಗೀಕರಣ ಮಾಡುವುದಕ್ಕೆ ನನಗೆ ಒಪ್ಪಿಗೆಯಿಲ್ಲ.

◆ **ನೀವು ಕಥೆ ಹೇಳುತ್ತೀರಿ. ಭಾಷಣಗಳನ್ನು ಬರೆಯುತ್ತೀರಿ ಮತ್ತು ಇತರೇ ಪ್ರಬಂಧಗಳನ್ನೂ ಬರೆಯುತ್ತೀರಿ. ಇದನ್ನು ಮಾಡುವಾಗ ನಿಮ್ಮ ತಂತ್ರದಲ್ಲಿ ಏನಾದರೂ ಬದಲಾವಣೆಯಾಗುತ್ತದೆಯೇ?**

ಹೌದು. ಭಾಷಣ ಇಲ್ಲವೇ ಪ್ರಬಂಧ ಬರಹಗಳಲ್ಲಿ ವಸ್ತುಸ್ಥಿತಿಯ ಸಂಬಂಧ ಬರುತ್ತದೆ. ಅದನ್ನು ಬದಲಾಯಿಸುವುದು ಸಾಧ್ಯವಿಲ್ಲ. ಬರವಣಿಗೆ ಮಾಡುವಾಗ ನಾನು ದಿನಚರಿಯನ್ನು ಬಳಸುತ್ತೇನೆ ಎಂದೇನಿಲ್ಲ. ಆದರೆ, 'ಫ್ರಮ್ ದ ಡೈರಿ...' ಬರೆಯುವಾಗ ಮಾತ್ರ ಡೈರಿ ಬಳಸಿದ್ದೆ. 1939ರ ಮಾರ್ಚ್‌ನಿಂದ ಸೆಪ್ಟೆಂಬರ್ ವರೆಗೆ ನಾನು ರಾಜಕೀಯ ಪ್ರಚಾರದಲ್ಲಿ ತೊಡಗಿದ್ದೆ. ನಾನಾಗ ದಿನಚರಿ ಬರೆದೆ. ಕಲ್ಕತ್ತೆಯಲ್ಲಿದ್ದಾಗಲೂ ದಿನಚರಿ ಬರೆದಿದ್ದೆ. ಇದೇ ದಿನಚರಿಯ ವಿಕಾಸವು 'ಶೋ ಯುವರ್ ಟಂಗ್'ನಲ್ಲಾಯಿತು. ನನ್ನ ಪುಸ್ತಕಗಳು ಶುದ್ಧ ಮಾದರಿಯವಲ್ಲ.

◆ **ಶಬ್ದ ಮತ್ತು ಚಿತ್ರಗಳ ಸಮ್ಮಿಶ್ರ ನಿಮ್ಮ ಬರವಣಿಗೆಯ ವೈಶಿಷ್ಟ್ಯವೇ?**

ನನ್ನ ಕೆಲಸದಲ್ಲಿ ಚಿತ್ರ ಮತ್ತು ಬರಹ ಎರಡೂ ಬಹುಮುಖ್ಯವಾಗಿ ಬರುತ್ತದೆ. ಸಮಯ ಸಿಕ್ಕರೆ ಶಿಲ್ಪಕಾರ್ಯವನ್ನೂ ಮಾಡುತ್ತೇನೆ. ಬರಹ ಹಾಗೂ ಲಲಿತಕಲೆಗಳ ನಡುವೆ ಘನಿಷ್ಠ ಸಂಬಂಧವಿದೆ. ಕಲ್ಕತ್ತೆಯಲ್ಲಿ ಬರೆದ 'ಶೋ ಯುವರ್ ಟಂಗ್' – ಅದರ ಒಂದು ಉತ್ತಮ ಉದಾಹರಣೆಯಾಗಿದೆ. ಚಿತ್ರದ ಸಹಾಯವಿಲ್ಲದೆ ನಾನದನ್ನು ಬರೆಯುವುದೇ ಸಾಧ್ಯವಿರಲಿಲ್ಲ. ಕಲ್ಕತ್ತೆಯ ಬಡತನವನ್ನು ಕಂಡು ನನ್ನ ಭಾಷೆಯು ಸ್ತಬ್ಧವಾಯಿತು. ನಾನು ತೀರ ಕುಸಿದು ಹೋದೆ. ನನಗೆ ಪದಗಳೇ ಸಿಗದಂತಾಯಿತು. ವ್ಯಕ್ತಿಯ ಪ್ರಜ್ಞೆಯಿಂದ ಭಾಷೆಯೇ ಮಾಯವಾಗುವುದು ಭಯ ಹುಟ್ಟಿಸುವಂಥದ್ದು. ನಿಮಗೆ